ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಮತ್ತು ಈ) ಹಾವೇರಿ ಜಿಲ್ಲೆಯಲ್ಲಿ 8915 ರೈತರಿಗೆ ಪರಿಹಾರ ನೀಡಬೇಕಾಗಿದ್ದು, ಈ ಪೈಕಿ 7906 ರೈತರಿಗೆ ಈಗಾಗಲೇ ಪರಿಹಾರ ವಿತರಿಸಲಾಗಿದೆ. ಇದೇ ರೀತಿ ಹಿರೇಕೆರೂರು ತಾಲ್ಲೂಕಿನ 336 ರೈತರಿಗೆ ಪರಿಹಾರದ ಹಣ ವಿತರಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಿಸ್ತರಣಾ ಶಿಕ್ಷಣ

185 (1000) ಶ್ರೀ ಕೃಷ್ಣಪಾಲೇಮಾರ್ (ಸೂರತ್‌ಕಲ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಉಳ್ಳಾಲದಲ್ಲಿರುವ ವಿಸ್ತರಣಾ ಶಿಕ್ಷಣ ಘಟಕ (ಕೃಷಿ ಸಂಶೋಧನಾ ಕೇಂದ್ರ) ಕಾರ್ಯ ಚಟುವಟಿಕೆಗಳ ವಿವರಗಳೇನು;

ಆ) ಸದರಿ ಕೇಂದ್ರ ಉಪಯುಕ್ತತೆಯನ್ನು ಜಿಲ್ಲೆಯ ರೈತರು ಪಡೆದುಕೊಳ್ಳುತ್ತಿದ್ದು, ಅಗತ್ಯ ಸೇವೆಗಳು ಕೇಂದ್ರದಿಂದ ಸಲ್ಲುತ್ತಿದ್ದರೂ ಕೇಂದ್ರವನ್ನು ಸ್ಥಳಾಂತರಿಸುವ ವಿಚಾರ ಸರ್ಕಾರದ ಮುಂದಿರುವುದು ನಿಜವೇ; ಹಾಗಿದ್ದಲ್ಲಿ ಸ್ಥಳಾಂತರಕ್ಕೆ ಕಾರಣಗಳೇನು;

ಇ) ಜಿಲ್ಲೆಯ ರೈತರುಗಳ ಬೇಡಿಕೆ ಮತ್ತು ಹಿತಾಸಕ್ತಿಗಳನ್ನು ಗಮನಿಸಿ ಕೇಂದ್ರವನ್ನು ಸ್ಥಳಾಂತರಿಸದೇ ಇರಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿರುವ ಕೃಷಿ ವಿಸ್ತರಣಾ ಶಿಕ್ಷಣ ಘಟಕದ ಕಾರ್ಯಚಟುವಟಿಕೆಗಳು ಕೆಳಗಿನಂತಿವೆ:

1. ರೈತರ ಜಮೀನಿನಲ್ಲಿ ಕ್ಷೇತ್ರ ಪ್ರಯೋಗಗಳನ್ನು ಏರ್ಪಡಿಸುವುದು.
2. ರೈತರ ಜಮೀನಿನಲ್ಲಿ ಅವರ ಖರ್ಚಿನಲ್ಲಿಯೇ ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
3. ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳೊಡನೆ ಕಾರ್ಯಕ್ರಮಗಳನ್ನು ಆಯೋಜಿಸುವುದು.
4. ಸಮತೋಲನ ಕೃಷಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
5. ಸಮಗ್ರ ಕೃಷಿ ಅಭಿವೃದ್ಧಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.
6. ವಿಸ್ತರಣಾ ಶಿಕ್ಷಣ ಚಟುವಟಿಕೆಗಳಾದ ತರಬೇತಿ, ಕ್ಷೇತ್ರ ಭೇಟಿ ಮತ್ತು ಕ್ಷೇತ್ರೋತ್ಸವ ಮುಂತಾದವುಗಳನ್ನು ವ್ಯವಸ್ಥೆಗೊಳಿಸುವುದು.

ಆ) ಹೌದು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ 15 ಜಿಲ್ಲೆಗಳಲ್ಲಿ 11 ಜಿಲ್ಲೆಗಳಿಗೆ ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿಯವರಿಂದ ಕೃಷಿ ವಿಜ್ಞಾನ ಕೇಂದ್ರಗಳು ಮಂಜೂರಾಗಿದ್ದು, ಕಂಕನಾಡಿ ಕೃಷಿ ವಿಜ್ಞಾನ ಕೇಂದ್ರ ಸಹ ಇವುಗಳಲ್ಲಿ ಒಂದಾಗಿದೆ. ಈ ಸಂಸ್ಥೆಯು ಸೂರತ್‌ಕಲ್ ಸೇರಿದಂತೆ ಮಂಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕಿನ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿದೆ. ಕೃಷಿ ವಿಜ್ಞಾನ ಕೇಂದ್ರ ಹಾಗೂ ವಿಸ್ತರಣಾ ಶಿಕ್ಷಣ ಘಟಕದ ಕಾರ್ಯಚಟುವಟಿಕೆಗಳು ಹೆಚ್ಚು ಕಡಿಮೆ ಒಂದೇ ಆಗಿದ್ದು ಅವೇ ಕೆಲಸಗಳ ಪುನರಾವರ್ತನೆಯಾದಂತಾಗುತ್ತದೆ. ಮೇಲಾಗಿ ಕೃಷಿ ವಿಜ್ಞಾನ ಕೇಂದ್ರಕ್ಕೆ ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ನೂರಕ್ಕೆ ನೂರರಷ್ಟು ಅನುದಾನವನ್ನು ನೀಡುತ್ತಿದೆ. ಆದರೆ ವಿಸ್ತರಣಾ ಶಿಕ್ಷಣ ಘಟಕ ಸಂಪೂರ್ಣವಾಗಿ ರಾಜ್ಯ ಸರ್ಕಾರದ ಅಲ್ಪ ಸ್ವಲ್ಪ ಅನುದಾನದ ಮೇಲೆ ಅವಲಂಬಿತವಾಗಿದೆ. ಇದಲ್ಲದೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಕೊಡಗು, ದಾವಣಗೆರೆ, ಮೈಸೂರು ಹಾಗೂ ಬೆಂಗಳೂರು ನಗರ ಜಿಲ್ಲೆಗಳಲ್ಲಿ ಈ ಕೃಷಿ ವಿಜ್ಞಾನ ಕೇಂದ್ರಗಳನ್ನು ಹೊಂದಿಲ್ಲದಿರುವ ಕಾರಣ ಈ ವಿಸ್ತರಣಾ ಶಿಕ್ಷಣ ಘಟಕವನ್ನು ಈ ಮೇಲೆ ತಿಳಿಸಿದ ಯಾವುದಾದರೊಂದು ಜಿಲ್ಲೆಗೆ ಸ್ಥಳಾಂತರಿಸುವ ನಿರ್ಣಯ ತೆಗೆದುಕೊಳ್ಳಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ.ಸಿ. ಪಾಟೀಲ್ : ನಾನು ಕೇಳಿರುವಂಥ ಪ್ರಶ್ನೆ ರಾಜ್ಯಕ್ಕೆ, ದೇಶಕ್ಕೆ ಅನ್ನ ಕೊಡುವಂಥ ರೈತನ ಅಳಿವು, ಉಳಿವಿನ ಪ್ರಶ್ನೆ. ತಾವು ಅನುಮತಿ ಕೊಟ್ಟರೆ, ನಾನು ಕೇಳಿರುವ ಪ್ರಶ್ನೆಯನ್ನು ರಿಪೀಟ್ ಮಾಡುತ್ತೇನೆ. ಕರಾವಳಿ ಪ್ರದೇಶದ ಮೀನುಗಾರರ ದೋಣಿಗಳಿಗೆ ಬಳಸುವ ಇಂಧನಕ್ಕೆ ಸಬ್ಸಿಡಿ ಕೊಡುತ್ತಿದ್ದು, ಅದೇ ರೀತಿ ರಾಜ್ಯದ ರೈತರ ಟ್ರ್ಯಾಕ್ಟರ್‌ಗಳಿಗೆ ಬಳಸುವ ಇಂಧನಕ್ಕೆ ಸಬ್ಸಿಡಿ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ ಎಂದು ನಾನು ಕೇಳಿರುವ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇವತ್ತು ಡೀಸೆಲ್ ಬೆಲೆ 37 ರೂಪಾಯಿ 50 ಪೈಸೆ ಇದೆ. ರೈತರು ಟ್ರ್ಯಾಕ್ಟರ್‌ಗಳನ್ನು ತಮ್ಮ ಹೊಲಗಳನ್ನು ಉಳುಮೆ ಮಾಡಲಿಕ್ಕೆ, ಬಿತ್ತನೆ ಮಾಡಲಿಕ್ಕೆ ಉಪಯೋಗಿಸುತ್ತಾರೆ. ಡೀಸೆಲ್‌ಗೆ ಒಂದು ಲೀಟರ್‌ಗೆ ಮೂವತ್ತೇಳೂವರೆ ರೂಪಾಯಿಗಳನ್ನು ಕೊಟ್ಟು, ಭೂಮಿಯನ್ನು ಉಳುಮೆ ಮಾಡಿ, ಬೆಳೆಯನ್ನು ತೆಗೆದು ಬದುಕುವಂಥ ಪರಿಸ್ಥಿತಿ ಬಹಳ ಕಷ್ಟದಾಯಕವಾಗಿದೆ. ನಮ್ಮ ಕೃಷಿ ಸಚಿವರೂ ಕೂಡ ರೈತ ಕುಟುಂಬದಿಂದ ಬಂದಂಥವರು. ಈ ಪ್ರಶ್ನೆಗೆ ಬಹಳ ಸ್ಪಷ್ಟವಾಗಿ ಉತ್ತರವನ್ನು ಇಲ್ಲ ಎಂದು ಕೊಟ್ಟಿದ್ದಾರೆ. ಹೀಗಾದರೆ ರೈತರು ಎಲ್ಲಿಗೆ ಹೋಗಬೇಕು? ಮೀನುಗಾರರ ದೋಣಿಗಳಿಗೆ ಬಳಸುವ ಡೀಸೆಲ್‌ಗೆ ಸಬ್ಸಿಡಿ ಕೊಡುತ್ತೀರಿ. ಆದರೆ, ರೈತರು ಯಾವ ಪಾಪ ಮಾಡಿದ್ದಾರೆ ಎಂದು ನೀವು ರೈತರಿಗೆ ಸಬ್ಸಿಡಿ ಕೊಡುತ್ತಿಲ್ಲ. ಮೀನುಗಳನ್ನು ಹಿಡಿಯದಿದ್ದರೆ ದೇಶವೇನೂ ಮುಳುಗಿ ಹೋಗುವುದಿಲ್ಲ. ಮೀನುಗಳು ಇನ್ನೂ ಚೆನ್ನಾಗಿ ಬೆಳೆದು ಬಲಿಷ್ಠವಾಗುತ್ತವೆ. ಹಾಗೆಂದು, ಮೀನುಗಾರರಿಗೆ ಸಬ್ಸಿಡಿ ಕೊಡಬೇಡಿ ಎಂದು ನಾವು ಹೇಳುವುದಿಲ್ಲ. ಅದೇ ರೀತಿ ರೈತನಿಗೂ